## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ. 506/2018

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ಬಸವರಾಜ | ಚಾಸಾಃ **10** ಪ್ರಾಸಾಃ **8** |
| **ತಂದೆಯ ಹೆಸರು** | : | ಚಂದ್ರಪ್ಪ | |
| **ವಯಸ್ಸು** | : | 35 ವರ್ಷ | |
| **ವೃತ್ತಿ** | : | ವ್ಯವಸಾಯ | |
| **ವಾಸಸ್ಥಳ** | : | ಕೆಂಗಲಹಳ್ಳಿ ಗ್ರಾಮ | |

ದಿನಾಂಕಃ **22-01-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ

ಚಾಸಾ-9 ಮತ್ತು 13 ಗೊತ್ತಿಲ್ಲ. ಈಗೇ ಸುಮಾರು 7 ವರ್ಷಗಳ ಹಿಂದೆ ಪೊಲೀಸರ ಕೋರಿಕೆಯ ಮೇರೆಗೆ 2 ದಾಖಲೆಗಳಿಗೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ, ಕಚ್ಚ ನಕಾಶೆಯನ್ನು ತಯಾರಿಸಿರುವುದಿಲ್ಲ.

ಸ್ಥಳ ಮಹಜರ್ ಅನ್ನು ಈಗಾಗಲೇ ನಿಪಿ-21 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-21(ಬಿ) ಎಂದು, ಕಚ್ಚ ನಕಾಶೆಯನ್ನು ಈಗಾಗಲೇ ನಿಪಿ-30 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-30(ಬಿ) ಎಂದು, ಸಾಕ್ಷಿಯು ನಿಪಿ-22 ಮತ್ತು 23 ಛಾಯಾಚಿತ್ರದಲ್ಲಿ ತಾನು ಇರುವ ಬಗ್ಗೆ ನೋಡಿ ಗುರುತಿಸಿದ್ದು , ಆದರೆ ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>

ದಿಃ 29-08-2017 ರಂದು ಸಂಜೆ 05-00 ರಿಂದ 06-00 ಗಂಟೆ ಸಮಯದಲ್ಲಿ ಚಾಸಾ-13 ರವರು ಸ್ಥಳ ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ-9 ರವರ ಸಮಕ್ಷಮ ನಿಪಿ-21 ರಂತೆ ಸ್ಥಳ ಮಹಜರ್ ಕ್ರಮವನ್ನು ಜರುಗಿಸಿ, ನಿಪಿ-30 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ, ನಿಪಿ-22 ಮತ್ತು 23 ರಂತೆ ಛಾಯಾಚಿತ್ರಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರಿಗೆ ನಿಪಿ-31 ರಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.